ಕರ್ನಾಟಕ ವಿಧಾನ ಸಭೆ

ಮಂಗಳವಾರ 3ನೇ ಮಾರ್ಚ್ 1992 ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು. ಅಧ್ಯಕ್ಷರು:- **(ಶ್ರೀ ಎಸ್.ಎಂ. ಕೃಷ್ಣರವರು)** ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ದ.ಕ. ಜಿಲ್ಲೆಯಲ್ಲಿ ಮೂರ್ತೆದಾರ ಸಹಕಾರ ಸಂಘ

101(871) ಶ್ರೀ ಜಿ.ಎಸ್. ಆಚಾರ್ (ಬ್ಯಿಂದೂರು):- ಮಾನ್ಯ ಗೃಹ ಹಾಗೂ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಂದಿ ಮಾರಾಟಕ್ಕಾಗಿ ಮೂರ್ತೆದಾರರ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ.

(ಆ) ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟು ಸಹಕಾರಿ ಸಂಘಗಳು ಸ್ಥಾಪಿತವಾಗಿವೆ (ವಿವರ ನೀಡುವುದು)

(ಇ) ಹಾಗಿದ್ದಲ್ಲಿ, ಅವುಗಳ ಕಾರ್ಯಾರಂಭ ಯಾವಾಗ ಆಯಿತು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು.)

(ಅ) ಶೇಂದಿ ಮಾರಾಟಕ್ಕಾಗಿ ಮೂರ್ತೆದಾರರ ಸಹಕಾರಿ ಸಂಘಗಳನ್ನು ನೋಂದಾಯಿಸುವ ವಿಚಾರ ಸಹಕಾರ ಇಲಾಖೆಯಿಂದ ನಡೆಯುತ್ತಿದೆ. ಹೀಗೆ ನೋಂದಾಯಿತವಾದ ಸಹಕಾರಿ ಸಂಘಗಳಿಗೆ ಅಬಕಾರಿ ಇಲಾಖೆಯಿಂದ ಶೇಂದಿ ಮಾರಾಟದ ಪರವಾನಗಿ ಕೊಡುವುದಕ್ಕಾಗಿ ಕರ್ನಾಟಕ ಅಬಕಾರಿ (ಟ್ಯಾಪಿಂಗ್ ಆಫ್ ಟ್ರೀಸ್) ನಿಯಮ 91ರ ಕಾನೂನನ್ನು ರಚಿಸಲಾಗಿದೆ.

ಈ ಬಗ್ಗೆ ವಿಸ್ತೃತ ಅಭಿಪ್ರಾಯಗಳನ್ನು, ಸಲಹೆ ಸೂಚನೆಗಳನ್ನು ಪಡೆದುಕೊಳ್ಳಲು ಈ ಜಿಲ್ಲೆಯ ಜಿಲ್ಲಾ ಸಭಾ ಸಚಿವರು, ಲೋಕಸಭಾ ಸದಸ್ಯರು ಮತ್ತು ವಿಧಾನ ಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ತಿನ ಸದಸ್ಯರುಗಳ ಸಭೆಯೊಂದನ್ನು ದಿನಾಂಕ 27-8-91 ರಂದು ಮಾನ್ಯ ಶಿಕ್ಷಣ ಸಚಿವರ ಸಮ್ಮುಖದಲ್ಲಿಯೂ ಮತ್ತು ದಿನಾಂಕ 26-10-91ರಂದು ಮಾನ್ಯ ಗೃಹ ಮತ್ತು ಅಬಕಾರಿ ಸಚಿವರ ಸಮ್ಮುಖದಲ್ಲಿ ನಡೆದು, ಈ ಸಭೆಯಲ್ಲಿ ಸೂಚಿಸಲಾದ ಅಭಿಪ್ರಾಯಗಳನ್ನು, ಸಲಹೆಗಳನ್ನು ಶಾಸಕರ ಮತ್ತು ಜಿಲ್ಲಾ ಮಂತ್ರಿಗಳ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಸಹಕಾರಿ ಇಲಾಖೆಯ ಜಂಟಿ ಕಾರ್ಯದರ್ಶಿಗಳಿಗೆ ಸುರಿ ಸಂಘಗಳನ್ನು ನೋಂದಣಿ ಮಾಡುವ ಬಗ್ಗೆ ಸೂಚನೆಯನ್ನು ಕೊಡಲಾಗಿದೆ. ಹಾಗೂ, ಈ ಸಂದರ್ಭದಲ್ಲಿ ಮೂರ್ತೆದಾರರ ಮನವಿಗಳನ್ನು ಮತ್ತು ಸಲಹೆಗಳನ್ನೂ ಸಹ ಗಮನದಲ್ಲಿಟ್ಟುಕೊಳ್ಳಲಾಗಿದೆ.

(ಆ) ವಿವರಗಳನ್ನು ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ಕೊಡಲಾಗಿದೆ.

(ಇ) ಮೂರ್ತೆದಾರರು ಮತ್ತು ಹಲವು ವಿಧಾನ ಸಭಾ ಸದಸ್ಯರೆಲ್ಲರಿಂದಲೂ ಬಂದ ಸಲಹೆಗಳನ್ನು ಜಿಲ್ಲಾಧಿಕಾರಿಗಳಿಗೆ ಪರಿಶೀಲನೆಗಾಗಿ ಕಳುಹಿಸಿದೆ. ಈ ಮಧ್ಯೆ, ದಕ್ಷಿಣ ಕನ್ನಡ ಮೂರ್ತೆದಾರರು ಮತ್ತು ಕೋ-ಆಪರೇಟಿವ್ ಫೆಡರೇಷನ್ ನಿಯಮಿತ ಮತ್ತು ಅನ್ನಿ ಪೂಜಾರಿ ಇವರುಗಳು ರಾಜ್ಯ ಶ್ರೇಷ್ಠ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 26597:91ನ್ನು ದಾಖಲು ಮಾಡಿದ್ದು, ದಿನಾಂಕ 9-1-1992 ರಂದು ಶ್ರೇಷ್ಠ ನ್ಯಾಯಾಲಯ ಈ ಬಗ್ಗೆ ನೀಡಲಾದ ತಡ ಆಜ್ಞೆ ಸದ್ಯದಲ್ಲಿ ಜಾರಿಯಲ್ಲಿದೆ.

ಅನುಬಂಧ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೊಂದಾಯಿಸಿದ ಮೂರ್ತೆದಾರರ ಸಹಕಾರ ಸಂಘಗಳ ಯಾದಿ.

ಮಂಗಳೂರು ಉಪ-ವಿಭಾಗ

1) ಮುಲ್ಕಿ (ಪಳೆಯಂಗಡಿ) ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
2) ದೇರೇಬೈಲು (ಕೊಂಡಾಡಿ) ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
3) ಕುಪ್ಪೆಪದವು ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
4) ಬಜ್ಪೆ ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
5) ಮೂಡುಪೆರಾರು ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
6) ವಾಮದಪದವು ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
7) ಸಜಿಪ ಮೂನ್ನೂರು ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
8) ನರಿಕೊಂಬು ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
9) ಪೌಳೂರು ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
10) ಪಡೀಲ್ ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
11) ನೀರುಮಾರ್ಗ ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)

ಪುತ್ತೂರು ಉಪ-ವಿಭಾಗ

1) ಉಪ್ಪಿನಂಗಡಿ ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
2) ಕುಂಬ್ರ ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
3) ಪುತ್ತೂರು ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
4) ಅಲಂಕಾರು ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
5) ನರಿಮೊಗ್ರು ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
6) ಪಂಜ ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
7) ಅಜ್ಜಾವರ ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
8) ಬಳ್ಳಾರ ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)

ಕುಂದಾಪುರ ಉಪ-ವಿಭಾಗ

1) ಹೆಮ್ಮಾಡಿ ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
2) ನಾವುಂದ ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
3) ಬ್ರಹ್ಮಾವರ ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
4) ಮೂಡಬಿದ್ರಿ ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
5) ಕೋಟ ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
6) ಕಿಮ್ಮಣ್ಣು ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)

7) ಮಜೂರು ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
8) ಉದ್ಯಾವರ ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
9) ಕಾಪು ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
10) ಕುಪಾಡಿ ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
11) ಮುಂಡ್ಕೂರು ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
12) ಕಲ್ಯಾ ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)
13) ಸಾಣೂರು ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)

ಶ್ರೀ ಜಿ.ಎಸ್. ಆಚಾರ್:- ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇಂದಿ ಮಾರಾಟಕ್ಕೆ ಮೂರ್ತೆದಾರರ ಸಹಕಾರ ಸಂಘಗಳನ್ನು ಸ್ಥಾಪಿಸಲಿಕ್ಕೆ ಅನೇಕ ಕಡೆಯಿಂದ ಆರ್ಜಿಗಳು ಬಂದಿವೆ. ಅವರಲ್ಲಿ 32 ಮಾತ್ರ ರಿಜಿಸ್ಟರ್ ಆಗಿವೆ. ಇನ್ನೂ ರಿಜಿಸ್ಟರ್ ಆಗಲಿಕ್ಕೆ ಎಷ್ಟು ಬಾಕಿ ಇವೆ ಎಂದು ನಾನು ಕೇಳಲಿಕ್ಕೆ ಬಯಸುತ್ತೇನೆ. ನನ್ನ ಕುಂದಾಪುರ ತಾಲ್ಲೂಕನ್ನು ತೆಗೆದುಕೊಂಡರೆ ಹುಕ್ಕುಂದ ಎನ್ನುವಲ್ಲಿ ಒಂದು ಸಹಕಾರ ಸಂಘವನ್ನು ಮಾಡುವುದಕ್ಕೆ ಚೀಪ್ ಪ್ರಮೋಟರ್ ಆಗಿ ಒಬ್ಬರ ನೇಮಕವಾಗಿದೆ. ಶೇರ್ ಕಲೆಕ್ಷನ್ ಆಗಿದೆ. ಅಸಿಸ್ಟಂಟ್ ರಿಜಿಸ್ಟ್ರಾರವರೆಗೂ ಅದು ಹೋಗಿದೆ. ಬಹುಶಃ ಅದು ರಿಜಿಸ್ಟರ್ ಆಗಿರಬೇಕು. ಅದು ಪಟ್ಟಿಯಲ್ಲಿ ಏತಕ್ಕೆ ತಪ್ಪಿಹೋಗಿದೆ ಎಂದು ಗೊತ್ತಿಲ್ಲ. ನನ್ನ ಮಿತ್ರರಾದ ಪ್ರತಾಪಚಂದ್ರ ಶೆಟ್ಟಿಯವರ ಕ್ಷೇತ್ರವಾದ ಕುಂದಾಪುರದಲ್ಲಿ ಇನ್ನೊಂದು ಸಹಕಾರ ಸಂಘ ಸ್ಥಾಪಿಸಬೇಕೆಂಬ ಪ್ರಪೋಸಲ್ ಇತ್ತು. ಅದು ಏನಾಗಿದೆ ಎನ್ನುವ ವಿಚಾರವನ್ನು ನಾನು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೆ, ಈಗಾಗಲೆ ಮೂರ್ತೆದಾರರ 54 ಸೊಸೈಟಿಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವೆ. 27ನೇ ಆಗಸ್ಟ್ 1991 ರಂದು ಮಾನ್ಯ ಶಿಕ್ಷಣ ಮಂತ್ರಿಯವರ ಕೊಠಡಿಯಲ್ಲಿ ಒಂದು ಸಭೆಯಾಗಿದೆ. ಆ ಸಭೆಯಲ್ಲಿ ಎಲ್ಲಾ ಶಾಸಕರು ಹಾಜರಿದ್ದರು. 25ನೇ ಅಕ್ಟೋಬರ್ 1991 ರಂದು ನನ್ನ ಕೊಠಡಿಯಲ್ಲಿ ಈ ಸಂಘದ ನೋಂದಾಣಿಕೆಯ ವಿಚಾರದ ಕುರಿತು ಶಾಸಕರು ಒಟ್ಟಿಗೆ ಸಭೆಯನ್ನು ನಡೆಸಿದ್ದೇವೆ. ಈಗಾಗಲೇ 55 ಸೊಸೈಟಿಗಳ ಪೈಕಿ 32 ರಿಜಿಸ್ಟರ್ ಆಗಿವೆ. ಇನ್ನು ಉಳಿದ ಸೊಸೈಟಿಗಳ ಬಗ್ಗೆ ಜ್ಯೂರಿಸ್ಡಿಕ್ಷನ್ ಬಗ್ಗೆ ಶಾಸಕರು ಪ್ರಸ್ತಾಪ ಮಾಡಿದಾಗ ಜಿಲ್ಲಾಧಿಕಾರಿಯವರು ಸಹ ಆ ಸಭೆಯಲ್ಲಿ ಹಾಜರಿದ್ದರು ಮತ್ತು ಅಡಿಷನಲ್ ರಿಜಿಸ್ಟ್ರಾರವರೂ ಕೂಡ ಆ ಸಭೆಯಲ್ಲಿ ಹಾಜರಿದ್ದರು. ಅಲ್ಲಿ ಎಲ್ಲಾ ಕಡೆ ಸರಿಯಾಗಿ ನೋಡಿ ಆ ಪಟ್ಟಿಯನ್ನು ಸರ್ಕಾರಕ್ಕೆ ಕಳಿಸಿ ಕೊಡಬೇಕೆಂದು ಅವರಿಗೆ ಆದೇಶ ಕೊಟ್ಟಿದ್ದೇವೆ. ತದನಂತರ ಫೆಡರೇಷನ್‌ನವರು ಕೂಡ ಕೋರ್ಟಿಗೆ ಹೋಗಿದ್ದಾರೆ. ಕೋರ್ಟಿನವರು ಕೂಡ ತಡೆಯಾಜ್ಞೆಯನ್ನು ಕೊಟ್ಟಿದ್ದಾರೆ. ಅವರ ವಿವರಗಳು ನಮಗೆ ಬಂದಿಲ್ಲ. ಬಂದನಂತರ ಅದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಜಿ.ಎಸ್. ಆಚಾರ್:- ಮಾನ್ಯ ಅಧ್ಯಕ್ಷರೆ, ಈ ತಡೆಯಾಜ್ಞೆಯನ್ನು ನೀಡುವ ಮೊದಲು ಕೆಲವು ಸಹಕಾರ ಸಂಘಗಳು ರಿಜಿಸ್ಟರ್ ಆಗಿವೆ. ಅವುಗಳಿಗೆ ಆಡಳಿತ ಮಂಡಳಿಯವರನ್ನು ನೇಮಿಸುವ ಹಂತದಲ್ಲಿಯೇ? ನೇಮಕವಾಯಿತೇ? ಈ ತಡೆಯಾಜ್ಞೆ ಹೊಸದಾಗಿ ರಿಜಿಸ್ಟರ್ ಆಗುವುದಕ್ಕೆ ಇದೆ ಎಂದು ನಾನು ಭಾವಿಸುತ್ತೇನೆ. ರಿಜಿಸ್ಟರ್ ಆದವುಗಳನ್ನು ಕಾರ್ಯಗತಗೊಳಿಸಲಿಕ್ಕೆ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ?

ಶ್ರೀ ಧರ್ಮಸಿಂಗ್:- ಎಲ್ಲೆಲ್ಲಿ ರಿಜಿಸ್ಟರ್ ಆಗಿದೆ, ಅವರಿಗೆ ನಾವು ಈಗಾಗಲೆ ಡೈರೆಕ್ಷನ್ ಕೊಟ್ಟಿದ್ದೇವೆ. ಅವುಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಆದರೂ ಕೂಡ ನಾವು ಒಂದು ಪ್ರಾವಿಜಿನ್ ಮಾಡಿದ್ದೇವೆ. ಏನೆಂದರೆ ಯಾರು ರಿಯಲ್ ಟ್ಯಾಲೆಂಟ್ ಇದ್ದಾರೆ ಅವರೇ ಚೀಪ್ ಪ್ರಮೋಟರ್ ಆಗಬೇಕೆಂದು ಇದೆ. ನಾನು ಇದನ್ನು ಆ ಸಭೆಯಲ್ಲಿಯೂ ಪ್ರಸ್ತಾಪ ಮಾಡಿದ್ದೇನೆ. ಎಲ್ಲೆಲ್ಲಿ ಇವತ್ತು ಚೀಪ್ ಪ್ರಮೋಟರ್ ಯಾರಾಗಿದ್ದಾರೆ, ಎಲ್ಲಿ ರಿಯಲ್ಲಾಗಿ ಟ್ಯಾಲೆಂಟ್ ಇಲ್ಲ ಅವರಿಗೆ ಅವಕಾಶ ಕೊಡಬಾರದೆಂಬ ಸರ್ಕಾರದ ಉದ್ದೇಶವಾದ ಕಾರಣ ಯಾರು ಅಲ್ಲಿ ಇಲ್ಲ, ಅವರಿಗೆ ಏನಾದರೂ ಆಗಿರಬಹುದು. ಅದರಲ್ಲಿ 32 ರಿಜಿಸ್ಟರ್ ಆಗಿದೆ. ಏನಾದರೂ ತೊಂದರೆಯಾದರೆ ಅದರ ಬಗ್ಗೆ ಕೂಡ ನಾನು ಡೈರೆಕ್ಷನ್ ಕೊಡುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ:- ಮಾನ್ಯ ಅಧ್ಯಕ್ಷರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಕ್ಸೈಸ್ ಇನ್ಸ್‌ಪೆಕ್ಟರುಗಳು ಪುನಃ ನಮ್ಮ ಊರಿನವರ ಮತ್ತು ಶಾಸಕರ ಅಭಿಪ್ರಾಯವನ್ನು ಕೇಳಲಿಕ್ಕೆ [illegible]ದ್ದಾರೆ. ಮುಂದೆ ಇದನ್ನು ಆಕ್ಷನ್

ಮಾಡಬೇಕೇ ಅಥವಾ ಸೊಸೈಟಿಯ ಮೂಲಕವೇ ರನ್ ಮಾಡಬೇಕೇ ಎಂದು ಅಭಿಪ್ರಾಯವನ್ನು ಕೇಳಲಿಕ್ಕೆ ಬಂದಿದ್ದಾರೆ. ಸರ್ಕಾರ ಪುನಃ ತನ್ನ ತೀರ್ಮಾನವನ್ನು ಬದಲಾಯಿಸಿದೆಯೇ? ಪುನಃ ಆಕ್ಷನ್ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ಎಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಧರ್ಮಸಿಂಗ್:- ಎಕ್ಸೈಜ್ ಸ್ಥಳದಲ್ಲಿರತಕ್ಕಂಥ ಅಧಿಕಾರಿಗಳು ಜ್ಯೂರಿಸ್‌ಡಿಕ್ಷನ್ ಬಗ್ಗೆ ಮೂರ್ತೆದಾರರ ಸಂಘ ಮಾಡುವಲ್ಲಿ ಎಲ್ಲೆಲ್ಲಿ ಇಂತಹ ತೊಂದರೆ ಇದೆ, ಏನೇನಾಗಿದೆ ಎನ್ನತಕ್ಕಂಥಾದ್ದರ ಬಗ್ಗೆ ಬಂದಿರಬಹುದು. ಈ ಬಗ್ಗೆ ಈಗಾಗಲೇ ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ಅದರ ಬಗ್ಗೆ ಮತ್ತೆ ಬೇರೆ ಆಕ್ಷನ್ ಮಾಡತಕ್ಕಂಥಾದ್ದು ಏನೂ ಇಲ್ಲ. ಕೋ-ಆಪರೇಟಿವ್ ಸೊಸೈಟಿ ಮುಖಾಂತರ ಅದು ಆಗತಕ್ಕದ್ದು.

ಶ್ರೀ ಕೆ. ಗಂಗಾಧರಗೌಡ:- ಸನ್ಮಾನ್ಯ ಅಧ್ಯಕ್ಷರೆ, ಎರಡು ವರ್ಷಗಳಿಂದ ಈ ಸಂಬಂಧ ಮಾರಾಟದ ಬಗ್ಗೆ ಸರ್ಕಾರಕ್ಕೆ ಒಂದು ಸ್ಪಷ್ಟವಾದಂಥ ಕೆಲಸ ಮಾಡುವುದಕ್ಕೆ ಸಾಧ್ಯವಾಗಿಲ್ಲ. ವರ್ಷಕ್ಕೆ ಸುಮಾರು 4-5 ಕೋಟಿ ರೂಪಾಯಿಗಳ ಹಣ ಸರ್ಕಾರಕ್ಕೆ ಏನು ಬರುವುದಿದೆ, ಅದು ಇವೊತ್ತು ಮಧ್ಯವರ್ತಿಗಳಿಗೆ ಸಿಗುತ್ತಿದೆ. ಎರಡು ವರ್ಷಗಳಿಂದ ಸರ್ಕಾರಕ್ಕೆ ಈ ಒಂದು ವ್ಯವಸ್ಥೆಯನ್ನು ಮಾಡಲಿಕ್ಕೆ ಏನೂ ಆಗಿಲ್ಲ. ನಿಮ್ಮ ಅಬ್ಕಾರಿ ನೀತಿ ಏನು ಎನ್ನತಕ್ಕಂಥಾದ್ದನ್ನು ಸ್ಪಷ್ಟಗೊಳಿಸಬೇಕು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಾಜು ಮುಡುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೊಸೈಟಿ ಮಾಡಿದ್ದಾರೆ. ಗುಲ್ಬರ್ಗ ಮತ್ತು ರಾಯಚೂರು ವಿಭಾಗಗಳಲ್ಲಿ ಹರಾಜು ಮಾಡುತ್ತಿದ್ದಾರೆ. ಈ ರೀತಿ ಹಣ ಪೋಲಾಗುವುದನ್ನು ನೀವು ಯಾವ ರೀತಿ ತಡೆಗಟ್ಟುತ್ತೀರಿ? ಇನ್ನು ಎರಡು ಮೂರು ವರ್ಷಗಳ ನಂತರ ನಮ್ಮ ಸದಸ್ಯತ್ವದ ಅವಧಿ ಮುಗಿದುಹೋಗುತ್ತದೆ. ಆದುದರಿಂದ, ಇದಕ್ಕೆ ತಾವು ಏನು ವ್ಯವಸ್ಥೆ ಮಾಡುತ್ತೀರಿ ಎನ್ನುವುದನ್ನು ತಿಳಿಸಬೇಕು.

ಶ್ರೀ ಧರ್ಮಸಿಂಗ್:- ಈಗಾಗಲೇ ಸರ್ಕಾರ ಕ್ರಮ ತೆಗೆದುಕೊಂಡ ನಂತರ, ಸರ್ಕಾರಕ್ಕೆ ಎಷ್ಟು ವರಮಾನ ಬರಬೇಕಾಗಿತ್ತು, ಅಷ್ಟು ಬರಬೇಕು, ಆ ಹಣವನ್ನು ಸೊಸೈಟಿ ಮುಖಾಂತರ ಕೊಡಬೇಕು ಎನ್ನತಕ್ಕಂಥಾದ್ದರ ಬಗ್ಗೆ ಸರ್ಕಾರ ನಿರ್ಧಾರ ತೆಗೆದುಕೊಂಡಿದೆ. ಬೇರೆ ಕಡೆ ಹರಾಜು ಮಾಡತಕ್ಕಂಥಾದ್ದು ಪ್ರತ್ಯೇಕ ಪ್ರಶ್ನೆಯಾಗಿರುವುದರಿಂದ, ನೀವು ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಮಲ್ಲೇಶ್ವರ ವೃತ್ತದಿಂದ ರಾಜಾಜಿನಗರದವರೆಗೆ ಇರುವ ಜನದಟ್ಟಣೆಯನ್ನು ತಡೆಗಟ್ಟುವುದು.

103(41) ಶ್ರೀ ಕೆ. ಲಕ್ಷ್ಮಣ್ (ರಾಜಾಜಿನಗರ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲ್ಲೇಶ್ವರ ವೃತ್ತದಿಂದ ರಾಜಾಜಿನಗರದ ನವರಂಗ್ ಚಿತ್ರಮಂದಿರದವರೆಗೂ ಹೆಚ್ಚಿನ ಜನಸಂದಣಿಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ಈ ಜನದಟ್ಟಣೆಯನ್ನು ಹಾಗೂ ವಾಹನ ಸಂಚಾರವನ್ನು ತಡೆಗಟ್ಟಲು ಫ್ಲೈ ಓವರ್‌ಗಳನ್ನು ನಿರ್ಮಿಸುವ ಆಲೋಚನೆಯಿದೆಯೇ;

ಇ) ಇದ್ದಲ್ಲಿ, ಎಂದಿನಿಂದ ನಿರ್ಮಾಣ ಕಾರ್ಯ ಕೈಗೊಳ್ಳಲಾಗುವುದು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) -ಹೌದು-

ಆ) -ಇಲ್ಲ-

ಇ) -ಉದ್ಭವಿಸುವುದಿಲ್ಲ-

ಶ್ರೀ ಕೆ. ಲಕ್ಷ್ಮಣ್:- ಸನ್ಮಾನ್ಯ ಅಧ್ಯಕ್ಷರೆ, ಮಲ್ಲೇಶ್ವರಂ ವೃತ್ತದಿಂದ ರಾಜಾಜಿನಗರದ ನವರಂಗ್ ಚಿತ್ರಮಂದಿರದ ವರೆಗೂ ಜನಸಂದಣಿಯ ಒತ್ತಡ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ, ಬಂದಿದೆಯೆಂದು